KAHS610018412014

**1ನೇ ಅಧಿಕ ಸಿವಿಲ್** ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನರಾಯಪಟ್ಟಣ.

ಉಪಸ್ಥಿತರು : **ಶ್ರೀ ಪುರುಷೋತ್ತಮ ಟಿ.ಪಿ.** ಬಿ.ಎ., ಎಲ್.ಎಲ್.ಬಿ.
1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.

ಮಿಸ್.ಸಂಖ್ಯೆ **20/2014**

ದಿನಾಂಕ: **12** ನೇ ಜೂನ್ 2026

ಅರ್ಜಿದಾರರು ಃ ವಾಬೇಗೌಡ ಬಿನ್ ಲೇಟ್ ದಾಸೇಗೌಡ
ಸುಮಾರು 60 ವರ್ಷ ವಯಸ್ಸು,
ವಾಸಃ ದಡದಳ್ಳಿ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,

**(** ಪರವಾಗಿ ಶ್ರೀ ಹೆಚ್.ಎಂ.ಎಸ್. ವಕೀಲರು **)**

ವಿರುದ್ಧ

ಎದುರುದಾರರುಃ ನಾಗರಾಜು ಡಿ.ಕೆ ಬಿನ್ ಲೇಟ್ ಪಟೇಲ ಕಾಳೇಗೌಡ
ಸುಮಾರು 50 ವರ್ಷ ವಯಸ್ಸು,

(ಮರಣ ಹೊಂದಿರುತ್ತಾರೆ )
ಇವರ ವಾರಸುದಾರರುಃ

1 ( ಎ) ಶ್ರೀಮತಿ ಗಿಡ್ಡಮ್ಮ ಕೋಂ
ಲೇಟ್ ನಾಗರಾಜು ಡಿ.ಕೆ
ಸುಮಾರು 59 ವರ್ಷ ವಯಸ್ಸು,

1(ಬಿ) ಕುಮಾರ ಬಿನ್
ಲೇಟ್ ನಾಗರಾಜು ಡಿ.ಕೆ
ಸುಮಾರು 41 ವರ್ಷ ವಯಸ್ಸು,

1 (ಸಿ) ಆನಂದ ಬಿನ್
ಲೇಟ್ ನಾಗರಾಜು ಡಿ.ಕೆ
ಸುಮಾರು 40 ವರ್ಷ ವಯಸ್ಸು,

ಎಲ್ಲರ ವಾಸಃ ದಡದಳ್ಳಿ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು,

**(ಪರವಾಗಿ ಶ್ರೀ ವೈ.ಕೆ.ಪಿ. ವಕೀಲರು )**

ಃ ಆದೇಶ ಃ

ಪ್ರಸ್ತುತ ಅರ್ಜಿಯನ್ನು ಅರ್ಜಿದಾರರು ಸಲ್ಲಿಸಿ, ಅಸಲು ದಾವಾ ಸಂಖ್ಯೆ 298/2003 ರಲ್ಲಿ ದಿನಾಂಕಃ 20-03-2006 ರಂದು ಏಕಪಕ್ಷೀಯವಾಗಿ ಘೋಷಣೆ ಮಾಡಿರುವ ತೀರ್ಪು ಮತ್ತು ಡಿಕ್ರಿಯನ್ನು ತೆರವುಗೊಳಿಸಿ, ದಾವೆಯನ್ನು ಮರು ಸ್ಥಾಪಿಸಿ ತನ್ನ ಪರವಾಗಿ ಸಾಕ್ಷ್ಯ ವಿಚಾರಣೆ ಮಾಡಲು ಅವಕಾಶ ನೀಡಬೇಕೆಂದು ಸದರಿ ಅರ್ಜಿಯನ್ನು ಸಲ್ಲಿಸಿ ಪ್ರಾರ್ಥಿಸಿಕೊಂಡಿರುತ್ತಾರೆ.

**2.** ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆಃ

ಎದುರುದಾರರು ಅರ್ಜಿದಾರರ ವಿರುದ್ಧ ಇದೇ ಘನ ನ್ಯಾಯಾಲಯದಲ್ಲಿ ಅಸಲು ದಾವಾ ನಂಬರ್.298/2003 ಅನ್ನು ನಿರ್ದಿಷ್ಟ ಕರಾರು ಪಾಲನೆ ಕೋರಿ ದಾಖಲು ಮಾಡಿದ್ದು, ಸದರಿ ದಿವಸ ಅಆಜಿದಾರರು ಗೈರು ಹಾಜರಾದ ಪ್ರಯುಕ್ತ ತನ್ನ ಸಾಕ್ಷ್ಯ

ವಿಚಾರಣೆ ಇಲ್ಲದೇ ಏಕಪಕ್ಷೀಯ ಆದೇಶವು ದಿನಾಂಕಃ20-03-2006 ರಂದು ಆಗಿರುತ್ತದೆ. ಪ್ರತಿವಾದಿಯು ದಿನಾಂಕಃ 17/01/1997 ರಂದು ದಾವಾ ಸ್ವತ್ತಿನ ಮಾರಾಟ ಒಪ್ಪಂದವನ್ನು ಮಾಡಿಕೊಂಡಿದ್ದು, ಸದರಿ ಮಾರಾಟ ಒಪ್ಪಂದದ ಪ್ರಕಾರ ಆಸ್ತಿಗೆ ನೋಂದಾಯಿತ ಮಾರಾಟ ಪತ್ರವನ್ನು ಕಾರ್ಯಗತಗೊಳಿಸಲು ಬಂದು ತನ್ನನ್ನು ಕೇಳಿಕೊಂಡಿದ್ದರು ಸಹ ಮಾರಾಟ ಒಪ್ಪಂದದ ಪ್ರಕಾರ ನಡೆದುಕೊಳ್ಳಲು ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಈ ದಾವೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ದಿನಾಂಕಃ 10.11.2008 ರಂದು ಪ್ರತಿವಾದಿಯು (ಅರ್ಜಿದಾರರು) ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಅದನ್ನು ಪರಿಗಣಿಸಿ ಏಕಪಕ್ಷೀಯ ಡಿಕ್ರಿಯನ್ನು ನ್ಯಾಯಾಲಯವು ಮಾಡಿದ್ದಾಗಿರುತ್ತದೆ. ಆದರೆ, ದಿನಾಂಕಃ 10.11.2008 ರಂದು ಅರ್ಜಿದಾರರು ತನಗೆ ಮೂಳೆ ನೋವು ಹಾಗೂ ಇನ್ನಿತರೆ ವಯೋಸಹಜ ಖಾಯಿಲೆಗಳಿಂದ ಬಳಲುತ್ತಿದ್ದು ತಾನು 8 ತಿಂಗಳಿಗಿಂತ ಹೆಚ್ಚು ಕಾಲ ಮಲಗಿದ್ದರಿಂದ ತಾನು ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗಿರುವುದಿಲ್ಲ ಹಾಗೂ ತನ್ನ ವಕೀಲರನ್ನು ಭೇಟಿ ಮಾಡಲು ಹಾಗೂ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗಲಿಲ್ಲ. ತಾನೂ ವೃತ್ತಿಯಲ್ಲಿ ಕೃಷಿಕನಾಗಿದ್ದು, ಹಾಗೂ ಅನಕ್ಷರಸ್ಥರಾಗಿದ್ದು, ನ್ಯಾಯಾಲಯದ ವಿಚಾರಣೆಯ ಬಗ್ಗೆ ತನಗೆ ತಿಳಿದಿಲ್ಲದಿರುವುದರಿಂದ, ತಾನು ಮೊಕದ್ದಮೆಗೆ ಬರಲು ಸಾಧ್ಯವಾಗಿರುವುದಿಲ್ಲ. ವಾದಿಯು ನಿಜವಾದ ವಿಷಯಗಳನ್ನು ಮರೆಮಾಚಿ ವಂಚನೆಯಿಂದ ತೀರ್ಪು ಪಡೆದಿದ್ದಾನೆ ಮತ್ತು ನಿಜವಾದ ವಿಷಯಗಳನ್ನು ಬಹಿರಂಗಪಡಿಸಿಲ್ಲ ಮತ್ತು ಮಾರಾಟ ಒಪ್ಪಂದದ ನಿರ್ದಿಷ್ಟ ಕಾರ್ಯಕ್ಷಮತೆಯ ಮೇಲೆ ಆರೋಪ ಮಾಡಿದ್ದಾನೆ. ಆದುದರಿಂದ, ಸದರಿ ಅರ್ಜಿಯನ್ನು ಸಲ್ಲಿಸುವಲ್ಲಿ ಸುಮಾರು

8 ವರ್ಷಗಳ ವಿಳಂಬವಾಗಿದೆ ಆದರೆ ಉದ್ದೇಶಪೂರ್ವಕದಿಂದ ಕೂಡಿರುವುದಿಲ್ಲ. ಸದರಿ ಅರ್ಜಿಯನ್ನು ಪುರಸ್ಕರಿಸದಿದ್ದರೆ, ಅರ್ಜಿದಾರರಿಗೆ ತುಂಬಾಲಾರದ ಕಷ್ಟನಷ್ಟಗಳುಂಟಾಗುತ್ತದೆ. ಆದುದರಿಂದ, ಘನ ನ್ಯಾಯಾಲಯವು ಕೃಪೆ ಮಾಡಿ ದಿನಾಂಕ 20.03.2006 ರ ಆದೇಶವನ್ನು ತೆರವು ಮಾಡಿ ಸದರಿ ದಾವೆಯನ್ನು ಪುನಃ ನಡೆಸಿಕೊಂಡು ಹೋಗಲು ಅರ್ಜಿದಾರರಿಗೆ ಅವಕಾಶ ನೀಡಬೇಕಾಗಿರುವುದು ಅತ್ಯವಶ್ಯಕವೆಂದು ಅರ್ಜಿದಾರನು ಪ್ರಾರ್ಥಿಸಿರುತ್ತಾರೆ.

**3.** ನ್ಯಾಯಾಲಯದಿಂದ ಎದುರುದಾರರಿಗೆ ನೋಟಿಸ್ ತಲುಪಿದ ನಂತರ, ಎದುರುದಾರನು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸಿದ್ದು, ತಮ್ಮ ತಕರಾರಿನಲ್ಲಿ, ಅರ್ಜಿದಾರರು ಎದುರಾಳಿಯ ವಿರುದ್ಧ ಸಲ್ಲಿಸಿರುವ ಪ್ರಸ್ತುತ ಅರ್ಜಿಯು ಕಾನೂನು ವಿದ್ಯಾ ಮಾನಗಳ ರೀತ್ಯಾ ನಿಲ್ಲತಕ್ಕದ್ದಲ್ಲ. ಅರ್ಜಿದಾರರು ಅರ್ಜಿ ಪ್ಯಾರಾ 2 ಮತ್ತು 3 ರಲ್ಲಿ ತಿಳಿಸಿರುವ ಸಂಗತಿಗಳು ಸಹ ಬಾಗಶಃ ನಿಜವಾಗಿದ್ದು, ಹಿಂದೆ ಎದುರಾಳಿಯು ಅರ್ಜಿದಾರರ ವಿರುದ್ಧ ನಿರ್ದಿಷ್ಟ ಕರಾರು ಅನುಷ್ಠಾನ ಪರಿಹಾ ಕೋರಿ ಚನ್ನರಾಯಪಟ್ಟಣ ಕಿರಿಯ ವ್ಯವಹಾರಿಕ ನ್ಯಾಯಾದೀಶರ ನ್ಯಾಯಾಲದಲ್ಲಿ ಅಸಲು ದಾವಾ ನಂ.298/2003 ರ ದಾವೆ ಹೂಡಿದ್ದು, ಈ ದಾವೆಯಲ್ಲಿ ಅರ್ಜಿದಾರನು ನ್ಯಾಯಾಲಯಕ್ಕೆ ಹಾಜರಾಗಿ ಆತನ ವಕೀಲರ ಮೂಲಕ ಎದುರಾಳಿಯ ಮೇಲ್ಕಂಡ ದಾವಕ್ಕೆ ಲಿಖಿತ ಹೇಳಿಕೆಯನ್ನು ಸಹ ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಪ್ರತಿವಾದಿಯಾದ ತನ್ನ ಬಾಬ್ತು ವಿಚಾರಣೆಯನ್ನು ಸಹ ನ್ಯಾಯಾಲಯಕ್ಕೆ ನೀಡದ ನಿಮಿತ್ಯ ಬೇಸತ್ತ ಆತನ ಪ್ರಾಜ್ಞ ವಕೀಲರು ಅರ್ಜಿದಾರರಿಗೆ ನೋಟೀಸ್ ನೀಡಿದರು

ಸಹ ಆತ ಮೇಲ್ಕಂಡ ದಾವೆಯಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ ದಾವೆಯಲ್ಲಿ ವಿಚಾರಣೆ ನೀಡದ ಕಾರಣ ಮೇಲ್ಕಂಡ ಕೇಸಿನಿಂದ ಅರ್ಜಿದಾರರ ವಕೀಲರು ನಿವೃತ್ತಿ ಹೊಂದಿರುತ್ತಾರೆ. ಆ ಕಾರಣ ಎದುರಾಳಿಯು ಅರ್ಜಿದಾರರ ವಿರುದ್ಧ ಸಲ್ಲಿಸಿರುವ ಮೇಲ್ಕಂಡ ದಾವೆಯು ದಿನಾಂಕ 20-3-2006 ರಲ್ಲಿ ತನ್ನ ಪರವಾಗಿ ಡಿಕ್ರಿಯಾಗಿರುತ್ತದೆ. ಮೇಲ್ಕಂಡ ದಾವೆಯ ಎಲ್ಲಾ ವಾಸ್ತವಿಕ ವಿಚಾರಗಳನ್ನು ಅರ್ಜಿದಾರರು ಮರೆಮಾಚಿ ಮತ್ತೆ ಪ್ರಸ್ತುತ ಕೇಸಿನ ಎದುರಾಳಿಯ ಮೇಲೆ ಇದೇ ಘನ ನ್ಯಾಯಾಲಯದಲ್ಲಿ ಡಿಕ್ರಿಯಾಗಿದ್ದ ವಿವಾದಾಸ್ಪದ ಸ್ವತ್ತಿನ ಬಗ್ಗೆ ಅರ್ಜಿದಾರರು ಶಾಶ್ವತ ನಿರ್ಭಂದಕಾಜ್ಞೆ ಆದೇಶ ಕೋರಿ ಮತ್ತೊಂದು ದಾವೆಯನ್ನು ಅಸಲು ದಾವಾ ನಂ.162/2013 ನ್ನು ಹೂಡಿದ್ದು, ಸದರಿ ದಾವೆಯಲ್ಲಿ ಎದುರುದಾರರು ಮೇಲ್ಕಂಡ ಅಸಲು ದಾವಾ ನಂ.298/2003 ರ ಕೇಸಿನ ವಿದ್ಯಾಮಾನಗಳನ್ನು ಮತ್ತು ದಾವೆಯು ಅರ್ಜಿದಾರರ ವಿರುದ್ಧ ದಿನಾಂಕ 20-3-2006 ರಲ್ಲಿ ಡಿಕ್ರಿಯಾಗಿರುವ ಸಂಗತಿಯನ್ನು ನ್ಯಾಯಾಲಯಕ್ಕೆ ಲಿಖಿತ ಹೇಳಿಕೆಯನ್ನು ಸಲ್ಲಿಸಿ ತಿಳಿಸಿದ ಮೇರೆ ನಂತರ ಅರ್ಜಿ ದಾರರು ವಾಸ್ತವಿಕ ಸಂಗತಿಗಳನ್ನು ಮರೆಮಾಚಿ ಪ್ರಸ್ತುತ ಅರ್ಜಿಯನ್ನು ಸುಳ್ಳು ಮಾಹಿತಿಯೊಂದಿಗೆ ಎದುರುದಾರರ ವಿರುದ್ಧ ಮೇಲ್ಕಂಡ ದಾವೆ ಡಿಕ್ರಿ ಆದ 9 ವರ್ಷಗಳ ನಂತರ ಸಲ್ಲಿಸಿರುತ್ತಾರೆ. ಆ ಕಾರಣ ಅರ್ಜಿದಾರರು ಸಲ್ಲಿಸಿರುವ ಪ್ರಸ್ತುತ ಅರ್ಜಿಯು ಕಾಲಮಿತಿ ಬಾದಕದಿಂದ ಕೂಡಿರುತ್ತೆ. ಆ ಬಾಬ್ತು ಪ್ರಸ್ತುತ ಅರ್ಜಿಯು ಕಾನೂನು ವಿದ್ಯಾಮಾನಗಳ ರೀತ್ಯಾ ನಿಲ್ಲತಕ್ಕದ್ದಲ್ಲ. ಅರ್ಜಿದಾರರು ಅರ್ಜಿಯಲ್ಲಿ ತಿಳಿಸಿರುವ ಅಸಲು ದಾವಾ ನಂ.298/2003 ರ ತೀರ್ಪು ಏಕಪಕ್ಷೀಯವಾದ ತೀರ್ಪಾಗಿರುವುದಿಲ್ಲ. ಸದರಿ ತೀರ್ಪು ನ್ಯಾಯಯುತವಾದ ತೀರ್ಪು ಆಗಿರುತ್ತದೆ. ಅರ್ಜಿದಾರರು ದಿನಾಂಕ 20-3-2006 ರ ತೀರ್ಪಿನ ವಿರುದ್ಧ ಸಂಭಂದಿಸಿದ

ನ್ಯಾಯಾಲಯಕ್ಕೆ ಸಿ.ಪಿ.ಸಿ. ಆದೇಶ 41 ನಿಯಮ 1 ರ ರೀತ್ಯಾ ಮೇಲ್ಮನವಿಯನ್ನು ಕಾನೂನು ಅನ್ವಯ ಸಲ್ಲಿಸಬೇಕಾಗಿರುತ್ತೆ. ಆ ಕಾರಣ ಅರ್ಜಿದಾರರು ಸಿ.ಪಿ.ಸಿ ಆದೇಶ 9 ನಿಯಮ 3 ರ ಮೇರೆ ಎದುರಾಳಿಯ ವಿರುದ್ಧ ಸಲ್ಲಿಸಿರುವ ಪ್ರಸ್ತುತ ಮಿಸ್ ಅರ್ಜಿಯು ಕಾನೂನು ವಿದ್ಯಾಮಾನಗಳ ರೀತ್ಯಾ ಸರಿ ಯಲ್ಲ. ಆ ಕಾರಣ ಅರ್ಜಿದಾರರು ಸಲ್ಲಿಸಿರುವ ಪ್ರಸ್ತುತ ಮಿಸ್ ಅರ್ಜಿಗೆ ಕಾನೂನು ಅನ್ವಯ ಮನ್ನಣೆಯು ಸಹ ಇರುವುದಿಲ್ಲ. ಆದುದರಿಂದ, ನ್ಯಾಯಾಲಯದವರು ಕೃಪೆ ಮಾಡಿ ಅರ್ಜಿದಾರರು ಎದುರುದಾರರ ವಿರುದ್ಧ ಸಲ್ಲಿಸಿರುವ ಮಿಸ್ ಅರ್ಜಿಯನ್ನು ವಜಾ ಮಾಡಬೇಕೆಂದು ಈ ಮೂಲಕ ಪ್ರಾರ್ಥಿಸಿರುತ್ತಾರೆ.

4. ಉಭಯಪಕ್ಷಗಾರರ ವಕೀಲರ ವಾದವನ್ನು ಆಲಿಸಲಾಯಿತು ಹಾಗೂ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಯಿತು.

5. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರ್ಯಾಲೋಚನೆಗೆ ಉದ್ಭವಿಸುತ್ತದೆ.

1. ಸದರಿ ಮದ್ಯಂತರ ಅರ್ಜಿಯನ್ನು ಪರಿಗಣಿಸಲು ಯೋಗ್ಯವಾಗಿರುತ್ತದೆಯೇ?

2. ಯಾವ ಆದೇಶ?

6. ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನ್ಯಾಯಾಲಯದ ಉತ್ತರಗಳು ಈ ಕೆಳಗಿನಂತಿವೆ:

*ಅಂಶ-1: ನಕಾರಾತ್ಮಕವಾಗಿ*
*ಅಂಶ-2: ಅಂತಿಮ ಆದೇಶದಂತೆ,*

ಕಾರಣಗಳು

**7**. ಅರ್ಜಿದಾರರು ತಮ್ಮ ಅರ್ಜಿಯಲ್ಲಿ, ಅಸಲು ದಾವಾ ಸಂಖ್ಯೆ 298/2003 ರಲ್ಲಿ ದಿನಾಂಕಃ 20-03-2006 ರಂದು ಏಕಪಕ್ಷೀಯವಾಗಿ ಘೋಷಣೆ ಮಾಡಿರುವ ತೀರ್ಪು ಮತ್ತು ಡಿಕ್ರಿಯನ್ನು ತೆರವುಗೊಳಿಸಿ, ದಾವೆಯನ್ನು ಮರು ಸ್ಥಾಪಿಸಿ ತನ್ನ ಪರವಾಗಿ ಸಾಕ್ಷ್ಯ ವಿಚಾರಣೆ ಮಾಡಲು ಅವಕಾಶ ನೀಡಬೇಕೆಂದು ಆದೇಶವನ್ನು ರದ್ದು ಪಡಿಸಿ, ಅರ್ಜಿದಾರರು ಸದರಿ ಕೇಸಿಗೆ ಹಾಜರಾಗಿ ಕೇಸನ್ನು ಪ್ರಾರ್ಥಿಸಿಕೊಂಡಿರುತ್ತಾರೆ.

**8**. ಅರ್ಜಿದಾರರು ತಮ್ಮ ಅರ್ಜಿಯಲ್ಲಿನ ಅಂಶಗಳನ್ನು ರುಜುವಾತುಪಡಿಸಲು ಪಿ.ಡಬ್ಲ್ಯೂ-1 ಆಗಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಿ.ಪಿ.ಸಿ. ಕ್ರಮಾದೇಶ 18 ನಿಯಮ 4 ರಡಿಯಲ್ಲಿ ಸಲ್ಲಿಸಿ, ತಮ್ಮ ವಾದ ಪತ್ರದಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪುನರುಚ್ಚರಿಸುತ್ತಾರೆ. ತಮ್ಮ ಪರವಾಗಿ ನು ನಿಪಿ-1, ಅಸಲು ದಾವಾ ಸಂಖ್ಯೆಃ298/2003 ರ ಆದೇಶ ಪುಟಗಳನ್ನು ಹಾಜರುಪಡಿಸಿದ್ದು, ನಿಪಿ-2 ಅಸಲು ದಾವಾ ಸಂಖ್ಯೆಃ 298/2003 ರ ವಕಾಲತ್ತು ಆಗಿದ್ದು, ನಿಪಿ-3 ಅಸಲು ದಾವಾ ಸಂಖ್ಯೆಃ298/2003 ರ ತೀರ್ಪು ಹಾಗೂ ಡಿಕ್ರಿಯ ಪ್ರತಿಯಾಗಿದ್ದು, ಸದರಿ ದಾವೆಗೆ ಅರ್ಜಿದಾರರು (ಪ್ರತಿವಾದಿ) ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ಲಿಖಿತ ತಕರಾರು ಸಲ್ಲಿಸಿದ್ದರ ಮೇರೆಗೆ ವಿವಾದಾಂಶ ರಚಿಸಿ ವಾದಿಯ ಸಾಕ್ಷ್ಯ ವಿಚಾರಣೆಗೆ ಮುಂದೂಡಿದ್ದು, ವಾದಿಯು ತನ್ನ ಮತ್ತು ಇಬ್ಬರು ಸಾಕ್ಷಿದಾರರನ್ನು ಪ್ರಾಸಾ 1 ರಿಂದ 3 ಎಂದು ಸಾಕ್ಷ್ಯ ವಿಚಾರಣೆಗೊಳಪಡಿಸಿದ್ದು, ಈ ಹಂತದಲ್ಲಿ ಅರ್ಜಿದಾರರು (ಪ್ರತಿವಾದಿ) ತಮಗೆ ದಾವೆ ನಡೆಸಲು ಸಹಕಾರ ನೀಡುತ್ತಿಲ್ಲ ಎಂಬ ಕಾರಣದಿಂದ ದಾವೆಯಿಂದ

ನಿವೃತ್ತರಾಗಿರುತ್ತಾರೆ. ಅದೇರೀತಿ, ಪ್ರಾಸಾ 1 ರಿಂದ 3 ರವರನ್ನು ಪಾಟೀ ಸವಾಲಿಗೊಳಪಡಿಸಿರುವುದಿಲ್ಲ. ಅದೇರೀತಿ, ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಮತ್ತು ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆಗೆ ಹಾಜರಾಗಿರುವುದಿಲ್ಲ. ನಂತರ ದಾವೆಯು ವಾದಕ್ಕೆ ಮಂದೂಡಲಾಗಿದ್ದು, ನಂತರ ದಿನಾಂಕಃ20.03.2006 ರಂದು ತೀರ್ಪು ಮತ್ತು ಡಿಕ್ರಿಯನ್ನು ನ್ಯಾಯಾಲಯವು ಮಾಡಿದ್ದಾಗಿರುತ್ತದೆ.

**9.** ಈ ಹಂತದಲ್ಲಿ ಪಿ.ಡಬ್ಲ್ಯೂ -1 ರವರ ಪಾಟೀ ಸವಾಲಿನ ಬಗ್ಗೆ ಚರ್ಚಿಸುವುದು ಅವಶ್ಯಕವಾಗಿರುತ್ತದೆ. ಪಿ.ಡಬ್ಲ್ಯೂ -1 ರವರನ್ನು ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿಯವರು ತಮ್ಮ ಪಾಟೀ ಸವಾಲಿನಲ್ಲಿ, ತನಗೆ ಈಗಲೂ ಸಹ ಆರೋಗ್ಯ ಚನ್ನಾಗಿಲ್ಲ. ತಾನು ವಕೀಲರ ಕಛೇರಿಗೆ ಎರಡು ಬಾರಿ ಬೇಟಿ ನೀಡಿರುತ್ತೇನೆ. ತಾನು ತಮ್ಮ ವಕೀಲರನ್ನು ಲಿಖಿತ ಹೇಳಿಕೆ ಸಲ್ಲಿಸಿದ ನಂತರ ಪಾಟೀ ಸವಾಲು ಮಾಡುವ ವಿಚಾರವಾಗಿ ಬೇಟಿ ಮಾಡಿಲ್ಲ, ತನಗೆ ದಿನಾಂಕ:20.03.2006 ರಲ್ಲಿ ಅಸಲು ದಾವಾ ಸಂಖ್ಯೆಃ 298/2003 ಡಿಕ್ರಿಯಾದ ವಿಚಾರ ತನ್ನ ವಕೀಲರ ತಾಂಡವೇಶ್ವರ ಮೂಲಕ ತಿಳಿಯಿತು ಎಂದರೆ ಸಾಕ್ಷಿಯು ನನಗೆ ತಿಳಿದಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ಡಿಕ್ರಿಯಾಗಿರುವ ವಿಚಾರ ಒಂದು ವರ್ಷದ ನಂತರ ತನಗೆ ತಿಳಿಯಿತು. ಡಿಕ್ರಿಯಾಗಿರುವ ವಿಚಾರ ತನಗೆ 2007 ನೆ ಸಾಲಿನಲ್ಲಿ ಜಮೀನಿನ ಬಳಿ ತಿಳಿಯಿತು. ಸದರಿ ಡಿಕ್ರಿಯಾದ ನಂತರ ಪ್ರಶ್ನಿಸಲು 2007 ರಲ್ಲಿತನಗೆ ಅನಾರೋಗ್ಯದ ಕಾರಣ ಅಂದರೆ ಪಕ್ಕೆ ನೋವು ಇದ್ದ ಕಾರಣ ಆಸ್ಪತ್ರೆಗೆ ಸೇರಿದ್ದು ಈಗಲೂ ಸಹ ಚಿಕಿತ್ಸೆ ಪಡೆಯುತ್ತಿದ್ದೇನೆ.

ತಾನು ಚಿಕಿತ್ಸೆಗೆ ಮೈಸೂರಿನ ಆಯುರ್ವೇದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ. ಮೇಲ್ಕಂಡ ದಾವೆಯಲ್ಲಿ ತನ್ನ ವಕೀಲರು ನಿವೃತ್ತಿಯಾಗಿರುವ ಬಗ್ಗೆ ತನಗೆ ಯಾವುದೇ ನೋಟಿಸು ನೀಡಿಲ್ಲ. ವಾದಿ ತನಗೆ ತೊಂದರೆ ನೀಡಿದ ನಂತರ ಅಂದರೆ 2007 ರ ನಂತರ ನಾನು ತಾಂಡವೇಶ್ವರ ವಕೀಲರನ್ನು ಬೇಟಿ ಮಾಡಿಲ್ಲ. ಎದುರುದಾರರು ಮತ್ತು ಆತನ ತಮ್ಮನು ತಮಗೆ ಡಿಕ್ರಿಯಾಗಿದೆ ಎಂದು 2007 ನೇ ಸಾಲಿನಲ್ಲಿ ತಿಳಿಸಿರುತ್ತಾರೆ. ತಾನು ಅಸಲು ದಾವಾ ಸಂಖ್ಯೆ:162/2013 ನ್ನು ಎದರುದಾರರು ಮತ್ತು ಆತನ ಸಹೋದರನ ವಿರುದ್ಧ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯನ್ನು ದಿನಾಂಕ:04.03.2013 ರಲ್ಲಿ ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ದಾವೆಯಲ್ಲಿ ಅಸಲು ದಾವಾ ಸಂಖ್ಯೆ 298/2003 ರ ಬಗ್ಗೆ ತಾನು ತಮ್ಮ ವಕೀಲರಿಗೆ ಮೇಲ್ಕಂಡ ದಾವೆಯನ್ನು ಸಲ್ಲಿಸುವ ಸಮಯಕ್ಕೆ ತಿಳಿಸಿರುತ್ತೇನೆ. ಪಕ್ಕೆ ನೋವು ಇರುವ ಬಗ್ಗೆ ತಾನು ತನ್ನ ಪ್ರಮಾಣ ಪತ್ರಿಕೆಯಲ್ಲಿ ಹೇಳಿ ಬರೆಸಿದ್ದೇನೆ. ತಾನು ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ತಾನು ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**10**. ಎದುರುದಾರರು ಡಿ.ಡಬ್ಲ್ಯೂ-1 ಆಗಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿಕೊಂಡಿದ್ದು, ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಿ.ಪಿ.ಸಿ. ಕ್ರಮಾದೇಶ 18 ನಿಯಮ 4 ರಡಿಯಲ್ಲಿ ಸಲ್ಲಿಸಿ ತಮ್ಮ ವಾದ ಪತ್ರದಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಪುನರುಚ್ಚರಿಸುತ್ತಾರೆ.

**11.** ವಾದಿ ಪರ ವಕೀಲರು ಆರ್**.**ಡಬ್ಲ್ಯೂ**-**1 ರವರನ್ನು ಪಾಟಿ ಸವಾಲಿಗೆ ಒಳಪಡಿಸಿದ್ದು**,** ಸದರಿಯವರು ದಾವಾ ಸ್ವತ್ತನು ಅರ್ಜಿದಾರರು ತಿಮ್ಮೇಗೌಡ ಎಂಬುವವರಿಂದ 1987 ರಲ್ಲಿ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸರಿ**.** ದಾವಾ ಸ್ವತ್ತಿನ ಆರ್**.**ಟಿ**.**ಸಿ ಅರ್ಜಿದಾರರ ಹೆಸರಿನಲ್ಲಿ ಇದೆ ಎಂದರೆ ಸರಿ**.** ಕರಾರು ದಿ**:**17-1-1997 ರಲ್ಲಿ ಆಗಿರುತ್ತದೆ**.** ಸದರಿ ಕರಾರಿನಲ್ಲಿ ಸಮಯ ನಿಗದಿ ಆಗಿಲ್ಲ ಎಂದರೆ ಸರಿ**.** ಮೇಲ್ಕಂಡ ಅಸಲು ದಾವೆಯಲ್ಲಿ ದಿನಾಂಕಃ03-03-2006 ರಲ್ಲಿ ತನ್ನ ವಿಚಾರಣೆ ಪ್ರಾರಂಭ ಆಗಿದೆ ಎಂದರೆ ಸರಿ**.** ಈ ದಾವೆಯನ್ನು ಪುನರ್ ಸ್ಥಾಪನೆ ಮಾಡಿದರೆ ತನಗೆ ತೊಂದರೆ ಆಗುತ್ತದೆ**.** ಇದೇ ನ್ಯಾಯಾಲಯದಲ್ಲಿ ಜಾರಿ ಸಂಖ್ಯೆಃ 23/2015 ನ್ನು ಸಲ್ಲಿಸಿದ್ದೇನೆ ಎಂದರೆ ಸರಿ**.** ಡಿಕ್ರಿಯ ಪ್ರಕಾರ ಡಿಕ್ರಿಯಲ್ಲಿ ನಿಗದಿಪಡಿಸಿರುವ ಅವಧಿಯೊಳಗೆ ಜಾರಿ ಕೇಸನ್ನು ಸಲ್ಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನಗೆ ಆರೋಗ್ಯ ಸರಿಯಿರಲಿಲ್ಲ ಎಂದು ನುಡಿಯುತ್ತಾರೆ**.** ತನಗೆ ಆರೋಗ್ಯ ಸರಿ ಇಲ್ಲದಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ**.**

**12.** ಅರ್ಜಿದಾರರು ತಮ್ಮ ಅರ್ಜಿಯಲ್ಲಿ ದಿನಾಂಕಃ 20.03.2006 ರಂದು ಅಸಲು ದಾವಾ ಸಂಖ್ಯೆಃ 298/2003 ನ್ನು ಏಕಪಕ್ಷಿಯವಾಗಿ ಡಿಕ್ರಿಮಾಡಿದ್ದು**,** ಅದನ್ನು ರದ್ದುಪಡಿಸಬೇಕೆಂದು ಪ್ರಾರ್ಥಿಸಿರುತ್ತಾರೆ**.**

**13.** ಈ ಹಂತದಲ್ಲಿ ನಿಪಿ 1 ಮತ್ತು 3 ರ ಬಗ್ಗೆ ಚರ್ಚಿಸುವುದು ಅವಶ್ಯ ಇದ್ದು, ನಿಪಿ 1, ಅಸಲು ದಾವಾ ಸಂಖ್ಯೆಃ 298/2003 ರ ಆದೇಶ ಪುಟಗಳಾಗಿದ್ದು, ಸಮನ್ಸ್

ಜಾರಿಯಾದ ನಂತರ ಪ್ರತಿವಾದಿಯು ತಮ್ಮ ಪರವಾಗಿ ವಕೀಲರನ್ನು ನೇಮಕ ಮಾಡಿಕೊಂಡು ದಿನಾಂಕಃ 17.10.2003 ರಂದು ತಮ್ಮ ಪರವಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ನಂತರ ವಿವಾದಾಂಶ ರಚಿಸಿ ಸಾಕ್ಷ್ಯ ವಿಚಾರಣೆಗೆ ಮುಂದೂಡಲಾಗಿದ್ದು, ವಾದಿಯು ಪ್ರಾಸಾ 1 ಆಗಿ ಮತ್ತು ಇಬ್ಬರು ಪಕ್ಷಗಾರರನ್ನು ಪ್ರಾಸಾ 2 ಮತ್ತು 3 ಆಗಿ ಸಾಕ್ಷ್ಯ ವಿಚಾರಣೆಗೆ ಒಳಪಡಿಸಿದ್ದು, ನಂತರ ಪ್ರತಿವಾದಿಯ ದಾವೆ ನಡೆಸಲು ಸಾಧ್ಯವಿಲ್ಲವೆಂದು ಪ್ರತಿವಾದಿಯ ಪರ ವಕೀಲರು ದಾವೆಯಿಂದ ನಿವೃತ್ತರಾಗಿದ್ದು, ವಾದ ಕೇಳಿದ ನಂತರ ತೀರ್ಪನ್ನು ನ್ಯಾಯಾಲಯವು ದಿನಾಂಕಃ 20.03.2006 ರಂದು ಘೋಷಿಸಲಾಗಿರುತ್ತದೆ. ನಿ.ಪಿ-3 ಅಸಲು ದಾವಾ ಸಂಖ್ಯೆಃ298/2003 ರ ತೀರ್ಪು ಹಾಗೂ ಡಿಕ್ರಿಯ ಪ್ರತಿಯಾಗಿದ್ದು, ಸದರಿ ದಾವೆಗೆ ಅರ್ಜಿದಾರರು (ಪ್ರತಿವಾದಿ) ತಮ್ಮ ವಕೀಲರ ಮೂಲಕ ಹಾಜರಾಗಿ ತಮ್ಮ ಲಿಖಿತ ತಕರಾರು ಸಲ್ಲಿಸಿದ್ದರ ಮೇರೆಗೆ ವಿವಾದಾಂಶ ರಚಿಸಿ ವಾದಿಯ ಸಾಕ್ಷ್ಯ ವಿಚಾರಣೆಗೆ ಮುಂದೂಡಿದ್ದು, ವಾದಿಯು ತನ್ನ ಮತ್ತು ಇಬ್ಬರು ಸಾಕ್ಷಿದಾರರನ್ನು ಪ್ರಾಸಾ 1 ರಿಂದ 3 ಎಂದು ಸಾಕ್ಷ್ಯ ವಿಚಾರಣೆಗೊಳಪಡಿಸಿದ್ದು, ಈ ಹಂತದಲ್ಲಿ ಅರ್ಜಿದಾರರು (ಪ್ರತಿವಾದಿ) ತಮಗೆ ದಾವೆ ನಡೆಸಲು ಸಹಕಾರ ನೀಡುತ್ತಿಲ್ಲ ಎಂಬ ಕಾರಣದಿಂದ ದಾವೆಯಿಂದ ನಿವೃತ್ತರಾಗಿರುತ್ತಾರೆ. ಅದೇರೀತಿ, ಪ್ರಾಸಾ 1 ರಿಂದ 3 ರವರನ್ನು ಪಾಟೀ ಸವಾಲಿಗೊಳಪಡಿಸಿರುವುದಿಲ್ಲ. ಅದೇರೀತಿ, ಪ್ರತಿವಾದಿಯು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಮತ್ತು ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆಗೆ ಹಾಜರಾಗಿರುವುದಿಲ್ಲ. ನಂತರ ದಾವೆಯು ವಾದಕ್ಕೆ ಮಂದೂಡಲಾಗಿದ್ದು, ನಂತರ

ದಿನಾಂಕಃ20.03.2006 ರಂದು ತೀರ್ಪು ಮತ್ತು ಡಿಕ್ರಿಯನ್ನು ನ್ಯಾಯಾಲಯವು ಮಾಡಿದ್ದಾಗಿರುತ್ತದೆ.

**14.** ಅರ್ಜಿದಾರರು (ಪ್ರಾಸಾ-1) ರವರು ತಮ್ಮ ಸಾಕ್ಷ್ಯದಲ್ಲಿ, ಸದರಿ ದಾವೆಯು ಡಿಕ್ರಿಯಾಗಿರುವುದು 2007 ರಲ್ಲಿ ತಮ್ಮ ವಕೀಲರ ಮೂಲಕ ತಿಳಿಯಿತು. ಸದರಿ ಡಿಕ್ರಿಯನ್ನು ಪ್ರಶ್ನಿಸಲು ಅನಾಗೋಗ್ಯದ ನಿಮಿತ್ತ ಸಾಧ್ಯವಾಗಿರುವುದಿಲ್ಲ. ತಾನೂ ಎದುರುದಾರರು ಮತ್ತು ಆತನ ತಮ್ಮನ ವಿರುದ್ಧ ಅಸಲು ದಾವಾ ಸಂಖ್ಯೆಃ 162/2013 ನ್ನು ಸಲ್ಲಿಸಿದ್ದೇನೆ. ತನಗೆ ಅನಾರೋಗ್ಯದ ಸಮಸ್ಯೆ ಇತ್ತು ಎಂದು ತನ್ನ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ 1 ರವರ ಸಾಕ್ಷ್ಯದ ಪ್ರಕಾರ ಮತ್ತು ನಿಪಿ 1, 3 ರ ಪ್ರಕಾರ ಅರ್ಜಿದಾರರಿಗೆ ಅಸಲು ದಾವಾ ಸಂಖ್ಯೆಃ 298/2003 ರ ಬಗ್ಗೆ ಸಂಪೂರ್ಣ ಮಾಹಿತಿ ಮತ್ತು ಜ್ಞಾನ ಇತ್ತು ಎಂಬುವುದು ಸ್ಪಷ್ಟವಾಗುತ್ತದೆ. ಅಲ್ಲದೇ, 2007 ರಲ್ಲಿ ಅಸಲು ದಾವಾ ಸಂಖ್ಯೆಃ 298/2003 ರ ದಾವೆ ಡಿಕ್ರಿಯಾಗಿರುವುದು ತಿಳಿದು ಬಂದಿದ್ದರೂ ಸಹ ಸದರಿ ಡಿಕ್ರಿಯನ್ನು ಸಾಕ್ಷಮ ನ್ಯಾಯಾಲಯದ ಮುಂದೆ ಪ್ರಶ್ನೆ ಮಾಡಿ ಸೂಕ್ತ ಕಾಲಮಿತಿಯೊಳಗೆ ಮೇಲ್ಮನವಿಯನ್ನು ಸಲ್ಲಿಸದೇ ಇರುವುದು ಕಂಡುಬರುತ್ತದೆ, ಅಲ್ಲದೇ, ಅರ್ಜಿದಾರರು ಹೇಳಿರುವಂತೆ ಅಸಲು ದಾವಾ ಸಂಖ್ಯೆಃ298/2003 ರ ಡಿಕ್ರಿಯು ಏಕಪಕ್ಷೀಯ ಡಿಕ್ರಿ ಆಗಿರುವುದಿಲ್ಲ. ಆದುದರಿಂದ, ಅರ್ಜಿದಾರರು ಅರ್ಜಿಯಲ್ಲಿ ಏಕಪಕ್ಷೀಯ ಡಿಕ್ರಿಯಾಗಿರುತ್ತದೆ ಎಂದು ಹೇಳಿರುವುದು ಸುಳ್ಳಿನಿಂದ ಕೂಡಿದ್ದು, ನ್ಯಾಯಾಲಯವನ್ನೇ ದಿಕ್ಕು ತಪ್ಪಿಸುವಂತಿದೆ. ಈ ಎಲ್ಲಾ ವಿಚಾರಗಳನ್ನು ನ್ಯಾಯಾಲಯವು ಸೂಕ್ಷ್ಮವಾಗಿ ಪರಿಗಣಿಸಿದಾಗ ಅರ್ಜಿದಾರರ

ನಡವಳಿಕೆಯ ಬಗ್ಗೆ ಸಂಶಯ ಉಂಟಾಗುತ್ತದೆ ಮತ್ತು ನ್ಯಾಯಾಲಯವನ್ನು ದಾರಿ ತಪ್ಪಿಸುವ ಉದ್ದೇಶದಿಂದಲೇ ಏಕಪಕ್ಷೀಯವಾಗಿ ಡಿಕ್ರಿಯಾಗಿರುತ್ತದೆ ಎಂದು ಸದರಿ ಡಿಕ್ರಿಯ ಬಗ್ಗೆ 2007 ರಲ್ಲಿ ತನಗೆ ತಿಳಿಯಿತು ಎಂದು ಸಂಗತಿಗಳನ್ನು ಸೃಷ್ಟಿಸಿಕೊಂಡು ಈ ಅರ್ಜಿಯನ್ನು ಸಲ್ಲಿಸಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಅಲ್ಲದೇ, ಅರ್ಜಿದಾರರು ಅನಾರೋಗ್ಯದಿಂದ ನಿಗದಿತ ಕಾಲಮಿತಿಯಲ್ಲಿ ಸದರಿ ಅರ್ಜಿಯನ್ನು ಸಲ್ಲಿಸಲು ಸಾಧ್ಯವಾಗಿರುವುದಿಲ್ಲ ಎಂದು ಹೇಳಿದ್ದು, ಈ ಅಂಶವನ್ನು ಸಾಬೀತುಪಡಿಸಲು ಸೂಕ್ತ ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಸಲ್ಲಿಸಿರುವುದಿಲ್ಲ. ಆದುದರಿಂದ, ಸದರಿ ಅರ್ಜಿಯನ್ನು ಸಲ್ಲಿಸಲು ಅನಾರೋಗ್ಯ ಎಂಬ ಇನ್ನೊಂದು ಕಾರಣವನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂಬುವುದು ಸ್ಪಷ್ಟವಾಗುತ್ತದೆ. ಅದುದರಿಂದ, ಡಿಕ್ರಿಯನ್ನು ಜಾರಿಯಾಗದಂತೆ ತಡೆಯಲು ಸುಳ್ಳು ಸಂಗತಿಗಳನ್ನು ಸೃಷ್ಟಿಸಿಕೊಂಡು ಸದರಿ ಅರ್ಜಿಯನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ. ಅಲ್ಲದೇ, ಸದರಿ ಅಸಲು ದಾವಾ ಸಂಖ್ಯೆಃ298/2003 ರ ಡಿಕ್ರಿಯನ್ನು ಸಕ್ಷಮ ನ್ಯಾಯಾಲಯದಲ್ಲಿ ಪ್ರಶ್ನಿಸಿ ಮೇಲ್ಮನವಿ ನ್ಯಾಯಾಲಯದಲ್ಲಿ ಅರ್ಜಿಯನ್ನು ಕಾನೂನು ಬದ್ದವಾಗಿ ಸಲ್ಲಿಸಬೇಕೇ ಹೊರತು, ಸದರಿ ಅರ್ಜಿಯನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಲು ಬರುವುದಿಲ್ಲ. ಅಲ್ಲದೇ, ಅಸಲು ದಾವಾ ಸಂಖ್ಯೆಃ 298/2003 ರ ಡಿಕ್ರಿಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಅದುದರಿಂದ, ಸದರಿ ಡಿಕ್ರಿಯು ಅಂತಿಮವಾಗಿರುತ್ತದೆ. ಆದುದರಿಂದ, ಎದುರುದಾರರು ಡಿಕ್ರಿಯಂತೆ ಪರಿಹಾರ ಪಡೆಯಲು ಅರ್ಹರಾಗಿದ್ದು, ಸದರಿ ಅರ್ಜಿಯಲ್ಲಿ ಕೇಳಿರುವಂತೆ ಪರಿಹಾರ ಪಡೆಯಲು ಅರ್ಜಿದಾರರು ಅರ್ಹರಾಗಿರುವುದಿಲ್ಲ. ಅದುದರಿಂದ, ಸದರಿ

ಅರ್ಜಿಯನ್ನು ಪರಿಗಣಿಸಲು ಯೋಗ್ಯವಾಗಿರುವುದಿಲ್ಲ. ಆದುದರಿಂದ, ಅಂಶ 1 ನ್ನು ನಕಾರಾತ್ಮಕವಾಗಿ ಎಂದು ಉತ್ತರಿಸಲಾಗಿದೆ.

**15.** ಅಂಶ**-2:** ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನಾನು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ**.**

ಆದೇಶ

ಅರ್ಜಿದಾರರು ದಿವಾನಿ ಪ್ರಕ್ರಿಯೆ ಸಂಹಿತೆ ಕ್ರಮಾದೇಶ 9 ನಿಯಮ 13 ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ರೂ. 5,000 ಖರ್ಚಿನೊಂದಿಗೆ ವಜಾಮಾಡಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಬಹಿರಂಗ ನ್ಯಾಯಾಲಯದಲ್ಲಿ ಇಂದು ದಿನಾಂಕ: 12 ನೇ ಜೂನ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(**ಪುರುಷೋತ್ತಮ ಟಿ**.**ಪಿ**.)**
1 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಚನ್ನರಾಯಪಟ್ಟಣ.

**-:**ಅನುಬಂಧ **:-**

ಅರ್ಜಿದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ ಗಳ ಪಟ್ಟಿಃ

ಪಿ.ಡಬ್ಲ್ಯೂ -1: ವಾಬೇಗೌಡ

<u>ಅರ್ಜಿದಾರರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ:</u>

ನಿಪಿ-1 : ಅಸಲು ದಾವಾ ಸಂಖ್ಯೆ: 298/2003 ರ ಧೃಡೀಕೃತ ಆದೇಶ ಪುಟ
ನಿಪಿ-2 : ಅಸಲು ದಾವಾ ಸಂಖ್ಯೆ: 298/2003 ರ ವಕಾಲತು
ನಿಪಿ-3 : ಅಸಲು ದಾವಾ ಸಂಖ್ಯೆ: 298/2003 ರ ತೀರ್ಪು ಮತ್ತು ಡಿಕ್ರಿಯ ಪ್ರತಿ

<u>ಎದುರುದಾರರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿ ಗಳ ಪಟ್ಟಿ:</u>

ಆರ್ .ಡಬ್ಲ್ಯೂ -1: ನಾಗರಾಜು

<u>ಎದುರುದಾರರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿ:</u>

ಇಲ್ಲಾ

**(ಪುರುಷೋತ್ತಮ ಟಿ.ಪಿ.)**
1 ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.